# ನಾಯಕಿಗೆ ಆಯುಷ್ಯ ಕಮ್ಮಿ

## ಶಿಲ್ಪಾ ರೈ

ಉದಯದ 'ಮಾನಸ ಸರೋವರ'ದ ಡಾ.ಸುನಿಧಿ



★ *ಸಿನಿಮಾಕ್ಕೂ ಧಾರಾವಾಹಿಗೂ ಇರುವ ವ್ಯತ್ಯಾಸ ಏನು?*

ಧಾರಾವಾಹಿ ಸಿನಿಮಾದ ಮುಂದುವರಿದ ಭಾಗ. ದುರಂತದಲ್ಲಿ ಕೊನೆ ಕಂಡ ಸಿನಿಮಾ ಕಥೆಗೆ ಮರು ಜನ್ಮ ನೀಡಲಾಗಿದೆ. ಇದರಲ್ಲಿ ಮುಂದಿನ ತಲೆಮಾರಿನ ಪೀಳಿಗೆ ಅನಾವರಣಗೊಂಡಿದೆ. ಸಿನಿಮಾದಲ್ಲಿ ನಟಿಸಿದ ಹಿರಿಯ ನಟರೂ ನಮ್ಮ ಜೊತೆ ಅಭಿನಯಿಸುತ್ತಿದ್ದಾರೆ. ಹಿರಿಯ ಮತ್ತು ಕಿರಿಯ ನಟ– ನಟಿಯರು ಹಳೆಯ ಕಥೆಗೆ ಹೊಸ ರೂಪ ನೀಡುತ್ತಿದ್ದಾರೆ.

★ *ಡಾ.ಸುನಿಧಿಯ ಬಗ್ಗೆ ಹೇಳುವುದಾದರೆ...*

ವೃತ್ತಿಪರ ಆದರ್ಶ ವ್ಯಕ್ತಿತ್ವದ ಹೆಣ್ಣು. ಆಕೆ ತನ್ನ ಕೆಲಸವನ್ನು ತುಂಬಾ ಗೌರವಿಸುತ್ತಾಳೆ. ತನ್ನ ರೋಗಿಗಳನ್ನು ಮಕ್ಕಳಂತೆಯೇ ನೋಡುತ್ತಾಳೆ. ಸಮಾಧಾನದಿಂದ ಆರೈಕೆ ಮಾಡುತ್ತಾಳೆ. ಮನೋ ವೈದರಿಗೆ ಆ ರೀತಿಯ ಮನೋಸ್ಥಿತಿ ಇರಲೇಬೇಕಾಗುತ್ತದೆ. ಹಿರಿಯ ನಟ ಶ್ರೀನಾಥ್ ಇಲ್ಲಿ ನನ್ನ ರೋಗಿಯಾಗಿದ್ದಾರೆ. ಅವರು ನನ್ನ ಹಾಗೆಯೇ ಅಸಂಖ್ಯಾತ ಮನೋರೋಗಿಗಳನ್ನು ಗುಣಪಡಿಸಿದ್ದಾರೆ. ಅಂತಹವರಿಗೆ ಹೀಗೇಕೆ ಆಯಿತು ಎನ್ನುವ ಯೋಚನೆ ನನ್ನದು. ಅವರನ್ನು ಮೊದಲಿನಂತೆ ಮಾಡಬೇಕು. ಅದಕ್ಕೆ ಕಾರಣರಾದವರಿಗೆ ತಕ್ಕ ಶಿಕ್ಷೆ ಆಗಬೇಕು ಎನ್ನುವುದು ಸದ್ಯದ ಆಲೋಚನೆ. ವಾಸ್ತವದಲ್ಲಿ ಇದಕ್ಕೆಲ್ಲಾ ನನ್ನ ತಾಯಿ ಕಾರಣ ಎನ್ನುವುದು ನನಗೆ ಗೊತ್ತಿಲ್ಲ. ಮನೆಯಲ್ಲೂ ನಾನು ತುಂಬಾ ಒಳ್ಳೆಯ ಮಗಳು ಅಪ್ಪ– ಅಮ್ಮನನ್ನು ತುಂಬಾ ಪ್ರೀತಿಸಿ, ಗೌರವಿಸುತ್ತೇನೆ. ಆದರೆ ಶ್ರೀನಾಥ್ ಸರ್ ಮೇಲೆ ನನ್ನಲ್ಲಿ ಏನೋ ಸೆಳೆತ.

★ *ಬಣ್ಣಕ್ಕೆ ಮರುಳಾಗಿದ್ದು ಹೇಗೆ?*

ಇದು ಉದ್ದೇಶಿತ ದಾರಿಯಲ್ಲ. ನಿಜ ಹೇಳಬೇಕು ಅಂದರೆ ನಾನು ಮೊದಲ ತಮಿಳು ಸಿನಿಮಾ 'ಕಾಕಾ' ನೋಡಿದೆ. ನಾಯಕ ನಟ  ಸೂರ್ಯ ಅಭಿನಯಕ್ಕೆ ಮಾರುಹೋಗಿ ಅವರ ಜೊತೆ ನಾನು ನಟಿಸಬೇಕು ಎನ್ನುವ ಅಭಿಲಾಷೆ ನನ್ನಲ್ಲಿ ಅಂದು ಮೂಡಿತ್ತು. ಮತ್ತೆ ಸುಮ್ಮನಾದೆ. ಆಕಸ್ಮಿಕವಾಗಿ ನಟನಾ ಕ್ಷೇತ್ರಕ್ಕೆ ಬಂದೆ. ನಟನೆಯನ್ನು ಯಾವುದೇ ತರಗತಿಗೆ ಹೋಗಿ ಕಲಿಯುವುದು ಕಷ್ಟದ ಕೆಲಸ. ಅಭ್ಯಾಸದಿಂದ ರೂಢಿಸಿಕೊಳ್ಳುವಂತಹದ್ದು, ನಾನು ಕನ್ನಡಿಯ ಎದುರು ನನ್ನ ಅನುಭವಕ್ಕೆ ದಕ್ಕಿದ್ದನ್ನು ಅನುಕರಿಸುವ ಮೂಲಕ ನಟನೆಯನ್ನು ಕಲಿತೆ. ನಟಿಯಾಗುತ್ತೇನೆ ಎನ್ನುವ ನಿರೀಕ್ಷೆ ಇರಲಿಲ್ಲ. ಈಗ ನಟಿಯಾಗಿಯೇ ಬೆಳೆಯಬೇಕು ಎಂಬ ಯೋಚನೆಯಿದೆ.

★ ಕಲಾ ಜಗತ್ತು ಹೇಗೆನಿಸುತ್ತದೆ?

ಕಲಾ ಜಗತ್ತು ತುಂಬಾ ಕಲರ್ ಫುಲ್ ಆಗಿಯೇ ಇದೆ. ಕೆಲವೊಮ್ಮೆ ಕಪ್ಪು ಬಿಳುಪು ಆಗಿ ಬಿಡಬಹುದು. ಷೇರು ಮಾರುಕಟ್ಟೆಗೂ ಕಲಾವಿದರ ಏಳು ಬೀಳಿಗೂ ಹತ್ತಿರದ ಹೋಲಿಕೆ ಇದೆ ಅಂತ ನನಗೆ ಅನ್ನಿಸುತ್ತಿದೆ. ಸಿನಿಮಾಗಳಲ್ಲಾದರೆ ನಟ ಮತ್ತು ನಟಿಯರಿಗೆ ತುಂಬಾ ವ್ಯತ್ಯಾಸ ಇದೆ. ನಟನೊಬ್ಬ ನಾಯಕನಾಗಿ ತುಂಬಾ ದೀರ್ಘಕಾಲ ಉಳಿಯಬಹುದು. ಆದರೆ ನಾಯಕಿಗೆ ಅಷ್ಟು ದೀರ್ಘ ಆಯುಷ್ಯ ಇಲ್ಲ. ಮೊದಲೆಲ್ಲ ನಾಯಕಿಯಾದ ನಟಿಯೊಬ್ಬಳು 20 ವರ್ಷಗಳ ಕಾಲ ನಾಯಕಿಯಾಗಿ ನಟಿಸುತ್ತಿದ್ದ ಉದಾಹರಣೆಯಿದೆ. ಕೆಲವು ವರ್ಷಗಳ ಹಿಂದೆ ಅದರ ಮಿತಿ 10 ವರ್ಷಗಳಿಗೆ ಇಳಿದಿತ್ತು. ಈಗ ಇನ್ನೂ ಕಡಿಮೆ ಆಗಿದೆ. ಕೊನೆಯುಸಿರು ಇರುವ ತನಕ ಅಭಿನಯವನ್ನು ಮಾಡಬಹುದು. ನಾಯಕಿಯಾಗಿ ಪ್ರಾಮುಖ್ಯತೆ ಇರಲ್ಲ. ಕಲರ್‌ಫುಲ್ ದುನಿಯಾದಲ್ಲಿ ಆಯುಷ್ಯ ಎಷ್ಟೇ ಇದ್ದರೂ ಹೆಸರು ಮಾತ್ರ ಉಳಿಯುತ್ತೆ. ಅದು ಯಾವುದೇ ಒಬ್ಬ ಕಲಾವಿದರ ಶ್ರೇಷ್ಠತೆಯ ಸಂಗತಿ. ನಾನು ಬಣ್ಣದ ಲೋಕಕ್ಕೆ ಬಂದು ನಾಲ್ಕು ವರ್ಷ ಆಯ್ತು. ಇಲ್ಲಿ ತುಂಬಾ ಕಲಿಯಲು ಅವಕಾಶ ಇದೆ. ಕಲಿಯುತ್ತಾ ಸಾಗುತ್ತಿದ್ದೇನೆ.

■ **ರಾಘವೇಂದ್ರ**